ನೀಡಿದೆ. ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ದೂರುಗಳು ಸಾಬೀತಾದರೆ, ಅಂತಹ ಅಪರಾಧಿಗಳು ಅತಿ ಶೀಘ್ರದಲ್ಲಿಯೇ ಸೇವೆಯಿಂದ ಚ್ಯುತಿ ಹೊಂದುವುದಕ್ಕೂ ಅರ್ಹರಾಗುತ್ತಾರೆ. ಕೆಲವು ಸಣ್ಣಪುಟ್ಟ ಪ್ರಕರಣಗಳಲ್ಲಿ ಲೋಕಾಯುಕ್ತರು, ಅಪರಾಧಿಯು ತನ್ನ ತಪ್ಪನ್ನು ಒಪ್ಪಿಕೊಂಡು ಮತ್ತೆ ಹಾಗೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರೆ, ಅವನಿಗೆ ಎಚ್ಚರಿಕೆ ಕೊಟ್ಟು ಕ್ಷಮಾದಾನ ನೀಡಬಹುದಾಗಿದೆ. ಆದರೆ ಆ ವ್ಯಕ್ತಿಯು ಶಿಕ್ಷಾರ್ಹ ಕ್ರಿಮಿನಲ್ ಅಪರಾಧ ಮಾಡಿದ್ದರೆ, ಕಾನೂನಿನ ಪ್ರಕಾರ ಅವನ ವಿರುದ್ಧ ಕ್ರಮ ಜರುಗಿಸಬೇಕಾಗುತ್ತದೆ. ಅದಲ್ಲದೆ ಲೋಕಾಯುಕ್ತರು ಕರ್ನಾಟಕ ರಾಜ್ಯದ ಭ್ರಷ್ಟಾಚಾರ ನಿವಾರಣಾ ಕಾನೂನನ್ನು ಕಾರ್ಯಗತಗೊಳಿಸುವ ಪರಿವೀಕ್ಷಕ ಹಾಗೂ ಆಡಳಿತಾತ್ಮಕ ಅಧಿಕಾರವನ್ನೂ ಹೊಂದಿರುತ್ತಾರೆ. ಹೀಗಾಗಿ ಅವರು ಕೆಲವು ಪ್ರಕರಣಗಳನ್ನು ಸೂಕ್ತ ಕ್ರಮಕ್ಕಾಗಿ ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ ವಹಿಸಿಕೊಡಬಹುದಾಗಿದೆ.

ಕರ್ನಾಟಕ ಲೋಕಾಯುಕ್ತ ಅಧಿನಿಯಮದಲ್ಲಿನ ಸೌಲಭ್ಯಗಳು ಲೋಕಾಯುಕ್ತರಿಗೆ ಸಾರ್ವಜನಿಕ ಸೇವೆಯಲ್ಲಿ ಇರುವವರ ಮಧ್ಯೆ ಭ್ರಷ್ಟಾಚಾರವನ್ನು ತಡೆಯಲು, ನಿಯಂತ್ರಿಸಲು ಮತ್ತು ಕಡಮೆಮಾಡಲು ಅವಕಾಶವನ್ನು ನೀಡುತ್ತದೆ. ಹಾಗೆಯೇ ಸಾರ್ವಜನಿಕ ಸೇವೆಗಳನ್ನು ಒದಗಿಸುವುದರಲ್ಲಿ ಜನರು ತೋಡಿಕೊಳ್ಳುವ ಕುಂದುಕೊರತೆಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಿಕೊಡುವುದಕ್ಕೂ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮಾಧ್ಯಮಗಳ ಪಾತ್ರ ಹಿರಿದಾದದ್ದು. ಲೋಕಾಯುಕ್ತರ ಕಾರ್ಯಗಳನ್ನು ಅವು ಆದ್ಯತೆಯ ಮೇಲೆ ಪ್ರಕಟಿಸುವುದರಿಂದ, ತಮ್ಮ ಕೆಲಸಕಾರ್ಯಗಳಿಗೆ ಲಂಚವನ್ನು ನೀಡಬೇಕಾಗಿಲ್ಲ ಎಂಬ ಪರಿಜ್ಞಾನ ಸಾಮಾನ್ಯ ಜನರಿಗೆ ಉಂಟಾಗುತ್ತದೆ. ಹೀಗೆ ಸಾರ್ವಜನಿಕರ ಹಣವನ್ನು ಸರ್ಕಾರಿ ನೌಕರರು ದೋಚುವುದು ಬಹುಮಟ್ಟಿಗೆ ಕಡಮೆಯಾಗಿದೆ. ಉದಾಹರಣೆಗೆ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ವಿರುದ್ಧ ಕಾಲಕಾಲಕ್ಕೆ ತೆಗೆದುಕೊಂಡ ಅಗತ್ಯ ಕ್ರಮಗಳಿಂದ ಜನರ ಕುಂದುಕೊರತೆಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಲು ಸಾಧ್ಯವಾಗಿದೆ ಮಾತ್ರವಲ್ಲ, ಪ್ರತಿ ವರ್ಷ ಮಹಾನಗರಪಾಲಿಕೆಗೆ ನೂರು ಕೋಟಿ ರೂಪಾಯಿಗಳಷ್ಟು ಉಳಿತಾಯವೂ ಉಂಟಾಗಿದೆ. ಲೋಕಾಯುಕ್ತ ಅಧಿನಿಯಮವು ಜಾರಿಗೆ ಬಂದಾಗಿನಿಂದ, ಕರ್ನಾಟಕದಲ್ಲಿ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಬಹುಮಟ್ಟಿಗೆ ಕಡಮೆಯಾಗಿದ್ದು, ಜನರ ಕುಂದುಕೊರತೆಗಳು ಹೆಚ್ಚಿನ ವಿಳಂಬವಿಲ್ಲದೆ ಈಗ ಇತ್ಯರ್ಥವಾಗುತ್ತಲಿವೆ.

### ಲೋಕಾಯುಕ್ತ ಅಧಿನಿಯಮದ ಬಗ್ಗೆ ವ್ಯಾಪಕ ಪ್ರಚಾರದ ಅಗತ್ಯ

ಕರ್ನಾಟಕದಲ್ಲಿ ಲೋಕಾಯುಕ್ತ ಅಧಿನಿಯಮವು, ಲೋಕಾಯುಕ್ತರಿಗೆ ಸರ್ಕಾರಿ ನೌಕರರ ಕಾರ್ಯಚಟುವಟಿಕೆಗಳ ಮೇಲೆ ನಿಗಾ ಇಡುವ ಜವಾಬ್ದಾರಿಯನ್ನು ವಹಿಸಿದೆ. ಆದರೂ ಕೇಂದ್ರ ಮತ್ತು ಇತರ ರಾಜ್ಯಗಳ ಸರಕಾರಗಳು ಇಂತಹ ಕಾನೂನುಗಳನ್ನು ಇನ್ನೂ ಜಾರಿಗೊಳಿಸಬೇಕಾಗಿದೆ. ಸಾರ್ವಜನಿಕ ಸೇವಾವಲಯದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಲು ಮತ್ತು ಜನರು ತಮಗೆ ದೊರಕಬೇಕಾದ ಸೇವೆಗಳನ್ನು ಪಡೆಯವಲ್ಲಿ ಇರುವ ಕುಂದುಕೊರತೆಗಳನ್ನು ನಿವಾರಿಸಲು ಇದು ಅತ್ಯಂತ ಅವಶ್ಯವಾದ ಕಾಯಿದೆಯಾಗಿದೆ.

ಈಗಿರುವ **ಭ್ರಷ್ಟಾಚಾರ ನಿವಾರಣ ಕಾಯಿದೆ, ೧೯೮೮** ಮತ್ತು **ಮಾಹಿತಿ ಹಕ್ಕಿನ ಕಾಯಿದೆ, ೨೦೦೫** – ಇವುಗಳಿಗೆ ಪೂರಕವಾಗಿರುವಂತೆ ಇನ್ನೂ ಕೆಲವು ಕಾನೂನುಗಳನ್ನು ಭಾರತೀಯ ಸಂಸತ್ತು ಜಾರಿಗೆ ತರುವುದು ಅತ್ಯಂತ ಆವಶ್ಯಕ. ಅದಲ್ಲದೆ, ವಿಶ್ವಸಂಸ್ಥೆಯ ಭ್ರಷ್ಟಾಚಾರ ವಿರೋಧಿ ಒಕ್ಕೂಟದ ನಿರ್ಧಾರಕ್ಕೆ ಭಾರತವು ಸಹಿಹಾಕಬೇಕು ಮತ್ತು ಅದರ ಒಂದು ಬೆಂಬಲಿಗ ರಾಷ್ಟ್ರವಾಗಬೇಕು. ಈಗಾಗಲೇ ೧೩೩ಕ್ಕೂ ಹೆಚ್ಚು ದೇಶಗಳು ಇದಕ್ಕೆ ಸಹಿ ಹಾಕಿವೆ ಮತ್ತು ೩೩ ದೇಶಗಳು ಇದಕ್ಕೆ ಬೆಂಬಲಿಗರಾಗಲು ಮುಂದೆ ಬಂದಿವೆ. ಈ ಒಕ್ಕೂಟದ ನಿರ್ಧಾರಗಳು ಸಂಬಂಧಿತ ಸರ್ಕಾರಗಳಲ್ಲಿನ ಭ್ರಷ್ಟಾಚಾರವನ್ನು ಹೊಡೆದುಹಾಕಲು ಬೇಕಾದ ಅಧಿನಿಯಮಗಳನ್ನು ಹೊಂದಿದ್ದು, ಅವು ಅಂತರರಾಷ್ಟ್ರೀಯ ಕಾನೂನಾಗಿ ಜಾರಿಗೆ ಬಂದಾಗ, ಪ್ರಪಂಚದಾದ್ಯಂತ ಭ್ರಷ್ಟಾಚಾರವನ್ನು ತಡೆಯಲು ಅತ್ಯಂತ ಪರಿಣಾಮಕಾರಿ ನ್ಯಾಯಾಂಗ ಸಾಧನವಾಗುವುದು. ಇದರಿಂದಾಗಿ ಜನಗಳು ತಾವು ಯಾವುದಕ್ಕೆ ಹಕ್ಕುದಾರರೋ ಅಂತಹ ಸೇವೆಗಳನ್ನು, ಯಾವುದೇ ಅಡ್ಡಿಆತಂಕಗಳಿಲ್ಲದೆ ಪಡೆದುಕೊಳ್ಳುವುದಕ್ಕೆ ಸಹಾಯಕವಾಗುವುದು. ಅಲ್ಲದೆ ಭೌತಿಕ ಸಂರಚನೆ ಮತ್ತು ಮಾನವ ಅಭಿವೃದ್ಧಿಯಲ್ಲಿ ಆಯಾ ದೇಶಗಳು, ವಿಶ್ವಸಂಸ್ಥೆಯ ಸಹಸ್ರಮಾನದ ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಅನುಕೂಲವಾಗುವುದು. ಭಾರತ ಸರ್ಕಾರವು ತನ್ನದೇ ಜನರ ಕಲ್ಯಾಣಕ್ಕಾಗಿ ಈ ಸಮಾವೇಶಕ್ಕೆ ಸದಸ್ಯ ರಾಷ್ಟ್ರವಾಗಿ ಸಹಿ ಹಾಕುವುದು ಅತ್ಯವಶ್ಯವಾಗಿದೆ. ಈ ದಿಶೆಯಲ್ಲಿ ಸಾರ್ವಜನಿಕ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಕಠಿಣ ನಿಲುವನ್ನು ತಾಳಿರುವ ಈಗಿನ ಪ್ರಧಾನಮಂತ್ರಿಗಳು ಬಹುಶೀಘ್ರವಾಗಿ ಕ್ರಮವನ್ನು ಕೈಗೊಳ್ಳುವರೆಂದು ಆಶಿಸೋಣ. ಈ ಬಗೆಯ ಕ್ರಮವು ನಮ್ಮ ದೇಶದಲ್ಲಿ ಭ್ರಷ್ಟಾಚಾರದ ಕಳೆಯನ್ನು ಬೇರುಸಹಿತ ಕಿತ್ತುಹಾಕುವುದನ್ನು ಸುಲಭಗೊಳಿಸುತ್ತದೆ. ಹಾಗೂ ೨೦೨೦ ರ ವೇಳೆಗೆ, ನಮ್ಮ ಹಿಂದಿನ ರಾಷ್ಟ್ರಪತಿಗಳ ಕನಸಿನಂತೆ, ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ★

ವಿವೇಕಪ್ರಭದ ಎಲ್ಲಾ ಸಂಚಿಕೆಗಳನ್ನು ಇಂಟರ್‌ನೆಟ್‌ನಲ್ಲಿ ನೀವು ಓದಬಹುದು. ಅದಲ್ಲದೆ, ಲೇಖಕರು, ಶೀರ್ಷಿಕೆ, ವರ್ಷ ಮತ್ತು ತಿಂಗಳುಗಳ ಆಧಾರದ ಮೇಲೆ ನಿಮಗೆ ಬೇಕಾದ ಲೇಖನವನ್ನು ಹುಡುಕಬಹುದು. ಅದಕ್ಕಾಗಿ ಕೆಳಗಿನ ವೆಬ್‌ಸೈಟ್ ಅನ್ನು ದಯವಿಟ್ಟು ಸಂದರ್ಶಿಸಿ:

**vivekaprabha.net**

**ವಿವೇಕಪ್ರಭ ಪತ್ರಿಕೆಯ ಚಂದಾದಾರಿಕೆಯ ಸಂಬಂಧದ ಎಲ್ಲ ವಿಚಾರಣೆಗಳಿಗಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆಮಾಡಿ (ಬೆಳಗ್ಗೆ 10.30 ರಿಂದ ಸಂಜೆ 5.30; ರಜಾದಿನಗಳನ್ನು ಹೊರತುಪಡಿಸಿ.)**

**9481533505 (ಕೆ.ಪಿ. ವೇಣುಗೋಪಾಲ್)**

# ವಿಶ್ವಸದಾಚಾರ ಸಂಹಿತೆ

ನ್ಯಾಯಮೂರ್ತಿ ಡಾ. ಎಂ. ರಾಮಾಜೋಯಿಸ್

**ಇಂದಿನ ಭ್ರಷ್ಟ ವ್ಯವಸ್ಥೆಗೆ ನಮ್ಮ ಭಾರತೀಯ ಸಂಪ್ರದಾಯದಲ್ಲಿನ ಧರ್ಮದ ಪರಿಕಲ್ಪನೆ ರಾಮಬಾಣವಾಗಬಲ್ಲುದು. ಇದು ಸಾರ್ವಕಾಲಿಕ ಸದಾಚಾರ ಸಂಹಿತೆಯನ್ನು ಬೋಧಿಸುವುದು. ಇದರ ಪಾಂಡಿತ್ಯಪೂರ್ಣ ವಿಶ್ಲೇಷಣೆಯನ್ನು ಮಾಡಿರುವ ಮಾನ್ಯ ಲೇಖಕರು ನಿವೃತ್ತ ನ್ಯಾಯಾಧೀಶರು, ಬಿಹಾರ ರಾಜ್ಯದ ಮಾಜಿ ರಾಜ್ಯಪಾಲರು ಮತ್ತು ಪ್ರಸ್ತುತ, ರಾಜ್ಯಸಭೆಯ ಸದಸ್ಯರು. ಅದಲ್ಲದೆ ಇವರು ಪ್ರಾಚೀನ ಭಾರತೀಯ ನ್ಯಾಯಶಾಸ್ತ್ರದಲ್ಲಿ ಆಳವಾದ ಅಧ್ಯಯನ ಮಾಡಿರುವ ವಿದ್ವಾಂಸರು ಕೂಡ.**

**ವೈ**ಯಕ್ತಿಕ ಹಕ್ಕುಗಳ ಮತ್ತು ಸ್ವಾತಂತ್ರ್ಯಗಳ ರಕ್ಷಣೆಗೆ ಒಂದಲ್ಲ ಒಂದು ಕಾನೂನು ಉಪಯುಕ್ತ ಎಂಬ ತತ್ತ್ವವು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅಂಗೀಕೃತವಾಗಿದೆ. ವ್ಯಕ್ತಿಯೊಬ್ಬನ ಸ್ವಾತಂತ್ರ್ಯಕ್ಕೆ ಬಾಧೆಯೊದಗಿದಲ್ಲಿ ಅವನು ರಾಜನನ್ನು ಮೊರೆಹೊಕ್ಕು ಕಾನೂನಿನ ರಕ್ಷಣೆ ಪಡೆಯುವುದು ಸಾಧ್ಯವಿತ್ತು. ರಾಜನಿಗೆ ಈ ನಿಗ್ರಹಸಾಮರ್ಥ್ಯ ಇದ್ದ ಕಾರಣದಿಂದಲೇ ಎಲ್ಲರೂ – ದುರ್ಬಲರು, ಪ್ರಬಲರು ಎಂಬ ಭೇದವಿಲ್ಲದೆ – ಕಾನೂನಿನ ಅಂಕೆಗೆ ಒಳಪಡುತ್ತಿದ್ದರು.

**ಶ್ರೇಷ್ಠತಮ ಸತ್ಯಗಳು ಯಾವ ಸಮಾಜದಲ್ಲಿ ಅನುಷ್ಠಾನಸಾಧ್ಯವಾಗುವುದೋ ಅದೇ ಶ್ರೇಷ್ಠಸಮಾಜ. ಇದೇ ನನ್ನ ಅಭಿಪ್ರಾಯ. ಸಮಾಜದಲ್ಲಿ ಶ್ರೇಷ್ಠ ಸತ್ಯವನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲದೆ ಇದ್ದರೆ ಸಾಧ್ಯವಾಗುವಂತೆ ಮಾಡಿ; ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು.**
*– ಸ್ವಾಮಿ ವಿವೇಕಾನಂದ*

### ಕಾನೂನಿನ ಉಗಮ

ಪ್ರಜಾಪಾಲನೆಗಾಗಿ 'ಕ್ಷತ್ರ'ದ (ಎಂದರೆ ರಾಜತ್ವದ) ಸೃಷ್ಟಿಯಾದ ಮೇಲೆ ಅದಷ್ಟೇ ಸಮಾಜಹಿತಕ್ಕೆ ಸಾಕಾಗದೆಂದು ಸರ್ವಾನ್ವಯಿಯಾದ 'ಧರ್ಮ'ವನ್ನು (ನ್ಯಾಯ ಅಥವಾ ಕಾನೂನನ್ನು) ಒದಗಿಸಿ ರಾಜನ ಅಧಿಕಾರವನ್ನು ಬಲಪಡಿಸಲಾಯಿತು ಎನ್ನುತ್ತದೆ ಬೃಹದಾರಣ್ಯಕೋಪನಿಷತ್.

ತದೇತತ್ ಕ್ಷತ್ರಸ್ಯ ಕ್ಷತ್ರಂ ಯದ್ಧರ್ಮಃ।
ತಸ್ಮಾದ್ಧರ್ಮಾತ್ಪರಂ ನಾಸ್ತಿ।
ಅಥೋ ಅಬಲೀಯನ್ ಬಲೀಯಾಂ
ಸಮಾಶಂಸತೇ ಧರ್ಮೇಣ।
ಯಥಾ ರಾಜ್ಞಾ ಏವಮ್।

"ರಾಜರಿಗೆಲ್ಲ ರಾಜನೆಂದರೆ ಧರ್ಮ. ಧರ್ಮಕ್ಕಿಂತ ಯಾರೂ ಮೇಲ್ಪಟ್ಟವರಲ್ಲ. ಪ್ರಬಲರಿಂದ ದುರ್ಬಲರಿಗೆ ಹಾನಿಯಾದಲ್ಲಿ ಧರ್ಮವು ರಾಜನ ಮೂಲಕ ಅದನ್ನು ನಿವಾರಿಸುತ್ತದೆ."

ಇದನ್ನು ಕುರಿತು ಡಾ. ಎಸ್. ರಾಧಾಕೃಷ್ಣನ್ ಹೀಗೆಂದಿದ್ದಾರೆ: "ರಾಜರೂ ಧರ್ಮಕ್ಕೆ, ಧರ್ಮಶಾಸನಕ್ಕೆ ಅಧೀನರಾದವರು."

ಸರ್ವೋ ದಂಡಜಿತೋ ಲೋಕೋ
ದುರ್ಲಭೋ ಹಿ ಶುಚಿರ್ಜನಃ।
ದಂಡಸ್ಯ ಹಿ ಭಯಾದ್ ಭೀತೋ
ಭೋಗಾಯೈವ ಪ್ರವರ್ತತೇ॥ (ಮನುಸ್ಮೃತಿ, ೭-೨೨)

"ಯಾವಾಗಲೂ ತಾವಾಗಿಯೇ ಎಂದರೆ ಹೊರಗಿನ ನಿರ್ಬಂಧವಿಲ್ಲದೆ ಶುದ್ಧವಾದ ನಡವಳಿಕೆಗೆ ಬದ್ಧರಾಗಿರುವವರು ವಿರಳ. ಯಾರಾದರೂ ದಾರಿತಪ್ಪಿದಾಗ ರಾಜನಿಗೆ ದಂಡಿಸುವ ಸಾಮರ್ಥ್ಯ ಇರುವ ಕಾರಣದಿಂದಲೇ ಜನ ಸನ್ಮಾರ್ಗದಲ್ಲಿರುತ್ತಾರೆ. ಹೀಗೆ ರಾಜದಂಡದ ಭಯವು ಜಗತ್ತಿನ ನೆಮ್ಮದಿ, ಸಂತೃಪ್ತಿಗಳಿಗೆ ಕಾರಣವಾಗುತ್ತದೆ."

ಹೀಗೆ ಆಧುನಿಕ ನ್ಯಾಯಶಾಸ್ತ್ರದಲ್ಲಿರುವಂಥ ಕಾನೂನಿನ ಮುಖ್ಯ ಸ್ವರೂಪವನ್ನು ಮೊತ್ತಮೊದಲ ಬಾರಿಗೆ ಉಪನಿಷತ್ತು ಸೂತ್ರರೂಪವಾಗಿ ತಿಳಿಸಿದೆ. ಸರ್ವಸಮ್ಮತ ಕಾನೂನಿನ ಅನುಸರಣೆಯನ್ನು ವಿಧಿಸಿ ಜಾರಿಗೊಳಿಸುವುದು ಒಂದು ವಿಶೇಷ ಅಧಿಕಾರ ಅಥವಾ sanction. "ರಾಜ್ಯವು ಪ್ರಜೆಗಳಿಗೆ ನೀಡುವ ಸಾಮಾನ್ಯ ಸೂಚನೆಗಳು ಮತ್ತು ಅಗತ್ಯಬಿದ್ದಾಗ ಅವುಗಳ ಅನುಸರಣೆಗಾಗಿ ಬಲ ಪ್ರಯೋಗ ಮಾಡುವುದು – ಈ ಎರಡರ ಸಮೂಹವೇ 'ಕಾನೂನು' (law) ಎನಿಸುತ್ತದೆ" ಎಂದಿದ್ದಾನೆ ಜಾನ್ ಆಸ್ಟಿನ್. ಎಂದರೆ ಕಾನೂನನ್ನು ಘೋಷಿಸುವ ಹೆಚ್ಚಿನ ರಾಜ್ಯಾಧಿಕಾರ ಮತ್ತು ಅದನ್ನು ಊರ್ಜಿತಗೊಳಿಸಲು ಬೇಕಾದ ರಾಜ್ಯಯಂತ್ರದ ಲಭ್ಯತೆ – ಈ ಎರಡೂ ಕಾನೂನಿನ ಮುಖ್ಯ ಅವಲಂಬನಗಳು ಎಂದು ಹೇಳಿದ ಹಾಗಾಯಿತು. ಪ್ರಬಲರಿಂದ ಹಾನಿಯಾದಾಗ ಅದರ ನಿಯಂತ್ರಣಕ್ಕೆ ಬೇಕಾದ ದಂಡಾಧಿಕಾರ ರಾಜನಿಗೆ ಇರುತ್ತದೆ ಎಂಬುದನ್ನು ಮೇಲೆ ಉಲ್ಲೇಖಿಸಿದ ಉಪನಿಷದ್‌ವಾಕ್ಯವೂ ಮನುಸ್ಮೃತಿವಾಕ್ಯವೂ ಸ್ಪಷ್ಟಪಡಿಸಿವೆ.

### ಒಂದು ಪ್ರಮುಖ ಭೇದ

ಆದರೆ ಒಂದು ಪ್ರಮುಖ ಭೇದವನ್ನು ಇಲ್ಲಿ ನಾವು ಗಮನಿಸಬೇಕು. ಪಾಶ್ಚಾತ್ಯ ನ್ಯಾಯಪದ್ಧತಿಯಲ್ಲಿ ರಾಜನು ನೀಡಿದ ಆದೇಶವು ಕಾನೂನು ಎನಿಸುತ್ತಿತ್ತು. ಹಿಂದೂ ಪರಂಪರೆಯಲ್ಲಿ ಪರಮಾಧಿಕಾರವು ಧರ್ಮದ್ದು ಮಾತ್ರ; ರಾಜ ಕೂಡ ಧರ್ಮಕ್ಕೆ ಅಧೀನನಾದವನು. ಪಾಶ್ಚಾತ್ಯ ನ್ಯಾಯಪದ್ಧತಿಯಲ್ಲಿ ಇರುವ, "ರಾಜನಾದವನು ಅಪರಾಧ ಮಾಡುವುದೇ ಇಲ್ಲ" ಎಂದರೆ,

ರಾಜನು ಕಾನೂನಿನ ಕಕ್ಷೆಗೆ ಹೊರಪಟ್ಟವನು (The king can do no wrong) ಎಂಬಂಥ ಸಿದ್ಧಾಂತ ಭಾರತದಲ್ಲಿ ಮಾನ್ಯವಾಗಿರಲಿಲ್ಲ. 'ರಾಜನಿಗೆ ಧರ್ಮದಿಂದ ಬೆಂಬಲ, ಧರ್ಮಕ್ಕೆ ರಾಜನಿಂದ ಪೋಷಣೆ' ಎಂಬ ಪಾರಸ್ಪರಿಕತೆಯೇ ಹಿಂದೆ ಉಲ್ಲೇಖ ಮಾಡಿದ ಬೃಹದಾರಣ್ಯಕ ಉಪನಿಷತ್ತಿಗೂ ಮನುಧರ್ಮಶಾಸ್ತ್ರಕ್ಕೂ ಸಮ್ಮತವಾದದ್ದು. ಧರ್ಮದ ಪಾಲನೆ ಮಾಡುವ ರಾಜನು ಶಕ್ತಿವಂತನಾಗುತ್ತಾನೆ. ಅದರಂತೆಯೇ ಕಾನೂನಿನ ಸಾಮರ್ಥ್ಯವೂ ರಾಜನ ವರ್ತನೆಯನ್ನು ಅವಲಂಬಿಸಿರುತ್ತದೆ. ಜನರ ಮನ್ನಣೆ ಪಡೆಯಬೇಕಾದರೆ ರಾಜನು ಧರ್ಮಶಾಸನಕ್ಕೆ ಬದ್ಧನಾಗಿರಲೇಬೇಕು. ರಾಜ್ಯವನ್ನು ಧರ್ಮಶಾಸನಾನುಗುಣವಾಗಿ ಆಳುವುದು ರಾಜನ ಪ್ರಪ್ರಥಮ ಹೊಣೆಗಾರಿಕೆ ಎಂದು 'ರಾಜಧರ್ಮ'ದ (ಈಗಿನ ಪರಿಭಾಷೆಯಲ್ಲಿ Constitutional Law) ವಿಧಿ. ಹೀಗೆ ಧರ್ಮವೇ ರಾಜಾಧಿಕಾರದ ಪ್ರಾಕಾರ. ಧರ್ಮನಿಯಮಗಳನ್ನು ರಾಜನು ಮನ ಬಂದಂತೆ ಬದಲಾಯಿಸಲು ಅವಕಾಶವಿರಲಿಲ್ಲ. ಧರ್ಮದ ಪಾರಮ್ಯವನ್ನು ಅಂಗೀಕರಿಸಿದಲ್ಲಿ ಮಾತ್ರ ದಕ್ಷ ಆಳ್ವಿಕೆ ಸಾಧ್ಯ. ಆಗ ಮಾತ್ರ ರಾಜ್ಯಾಧಿಕಾರದ ದುರುಪಯೋಗ ತಪ್ಪುತ್ತದೆ.

### ನ್ಯಾಯದ ಪರಮಾಧಿಕಾರ

೧೯೪೯ರ ನವೆಂಬರ್ ೨೬ ರಂದು ಸ್ವೀಕೃತವಾಗಿ, ೧೯೫೦, ಜನವರಿ ೨೬ ರಂದು ಜಾರಿಗೆ ಬಂದ ಭಾರತ ಸಂವಿಧಾನ (Constitution) ಪ್ರಾಚೀನ ಭಾರತೀಯ 'ರಾಜಧರ್ಮ'ದ ಆಧುನಿಕ ರೂಪ. ರಾಜ್ಯದ ಮೂರು ಸಾಧನಗಳಾದ **ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ** – ಇವು ಸಂವಿಧಾನದ ಪ್ರಾಕಾರದೊಳಗೇ ಕಾರ್ಯ ಮಾಡಬೇಕು. ಈ ಮೂರರಲ್ಲಿ ಯಾವುದೇ ಒಂದು ಅಂಗ ಇನ್ನೊಂದಕ್ಕಿಂತ ಹೆಚ್ಚು ಬಲಯುತವೆಂಬ ವಾದವು ನಿರರ್ಥಕ. ಸಂವಿಧಾನ ಸಭೆಯಲ್ಲಿ ಸಂವಿಧಾನದ ಧ್ಯೇಯ ಘೋಷಣೆಯ (Objectives Resolution) ನಿರ್ಣಯವನ್ನು ಜವಾಹರಲಾಲ್ ನೆಹರು ಮಂಡಿಸಿದರು. ಅದನ್ನು ಸಮರ್ಥಿಸುವಾಗ ಡಾ. ಎಸ್. ರಾಧಾಕೃಷ್ಣನ್ ಹೀಗೆ ಹೇಳಿದರು: "ರಾಜರಿಗೂ ರಾಜ ಎಂದರೆ ಧರ್ಮ. ಪ್ರಜೆಗಳು ಹಾಗೂ ಪ್ರಭುಗಳು – ಇಬ್ಬರನ್ನೂ ಆಳುವುದು ಧರ್ಮವೇ. ಹೀಗೆ ನ್ಯಾಯದ ಪರಮಾಧಿಕಾರವನ್ನೇ ನಾವು ಇಲ್ಲಿ ಎತ್ತಿ ಹಿಡಿದಿರುವುದು."

ಸಂವಿಧಾನದ ಕರಡನ್ನು ಸಿದ್ಧಪಡಿಸಿದ ಸಮಿತಿಯ ಅಧ್ಯಕ್ಷ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ೩೬೮ನೇ ವಿಧಿಯು ರಾಜ್ಯದ ಅಂಗಗಳ ಅಧಿಕಾರವನ್ನು ಮಿತಗೊಳಿಸಿರುವುದರ ಬಗ್ಗೆ ಹೀಗೆ ವಿವರಣೆಯನ್ನು ನೀಡಿದರು: "ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ – ಇವುಗಳ ಅಧಿಕಾರವನ್ನು ನಿರೂಪಿಸಿರುವ ಮೂಲಭೂತ ಗ್ರಂಥವೇ ಈ ಸಂವಿಧಾನ. ಸಂವಿಧಾನವು ಮೇಲಣ ಮೂರು ಅಂಗಗಳಿಗೆ ಜನ್ಮ ಕೊಡುವುದು ಮಾತ್ರವಲ್ಲ. ಅವುಗಳ ಅಧಿಕಾರದ ಯುಕ್ತ ಮಿತಿಗಳನ್ನೂ ನಿರ್ಧರಿಸುವ ಹೊಣೆಗಾರಿಕೆಯನ್ನೂ ಹೊತ್ತಿದೆ. ಹೀಗೆ ಮಿತಿಯನ್ನು ವಿಧಿಸದಿದ್ದಲ್ಲಿ ಆ ಮೂರು ಅಂಗಗಳೂ ಸ್ವೇಚ್ಛೆಯಾಗಿ ವರ್ತಿಸತೊಡಗಿ ಗೊಂದಲವೇರ್ಪಡುತ್ತದೆ."

ಭಾರತದ ಸರ್ವೋಚ್ಚ ನ್ಯಾಯಾಧೀಶರಾಗಿದ್ದ ಪಿ.ಬಿ.ಗಜೇಂದ್ರ ಗಡಕರ್ ಕಾನೂನು ಆಯೋಗದ ೪೬ ನೇ ವರದಿಯಲ್ಲಿ ಇದೇ ಅಭಿಪ್ರಾಯನ್ನು ಹೀಗೆ ಸೂಚಿಸಿದ್ದಾರೆ: "ಭಾರತದಂಥ ಪ್ರಜಾಪ್ರಭುತ್ವದಲ್ಲಿ ಪಾರಮ್ಯ ಎಂದರೆ ಪರಮಾಧಿಕಾರ ಇರಬಹುದಾದ್ದು ಸಂವಿಧಾನಕ್ಕೆ ಮಾತ್ರ. ಸಂಸತ್ತು ಮತ್ತು ವಿಧಾನಸಭೆಗಳಿಗೂ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಗೂ ಅಧಿಕಾರ ನೀಡಿ, ಅವುಗಳ ಕರ್ತವ್ಯಗಳನ್ನೂ, ಪರಿಮಿತಿಗಳನ್ನೂ ವಿಧಿಸುವುದು ಸಂವಿಧಾನವೇ."

ಇದರ ತಾತ್ಪರ್ಯ ಹೀಗಿದೆ: ಮೇಲೆ ಉಲ್ಲೇಖಿಸಿದ ಮಂತ್ರದ ಮೂಲಕ ಬೃಹದಾರಣ್ಯಕ ಉಪನಿಷತ್ತು ಧರ್ಮಪಾರಮ್ಯವೆಂದು ವಿವರಿಸಿದ ತತ್ತ್ವವೇ ಆಧುನಿಕ ಸನ್ನಿವೇಶದಲ್ಲಿ ಸಂವಿಧಾನದ ಪಾರಮ್ಯವೆನಿಸಿದೆ

### 'ಧರ್ಮ' ಮತ್ತು 'ಮತ'

'ಧರ್ಮ' ಎಂಬ ಮಾತನ್ನು 'ರಿಲಿಜನ್' ಎಂದು ಅನುವಾದಿಸುವ ರೂಢಿ ಬಂದಿರುವುದು ಒಂದು ವಿರೋಧಾಭಾಸ. ಸಂವಿಧಾನದ ಹಿಂದಿ ಅವತರಣದಲ್ಲಿ 'ರಿಲಿಜನ್' ಎಂಬುದನ್ನು 'ಧರ್ಮ' ಎಂದು ಅನುವಾದಿಸಿರುವುದು ದೋಷಯುಕ್ತವಾದುದು. 'ರಿಲಿಜನ್' ಎಂಬ ಮಾತಿಗೆ ಸಮಾನಪದವಾಗಬೇಕಾಗಿದ್ದುದು 'ಮತ', 'ಸಂಪ್ರದಾಯ' ಅಥವಾ 'ಪಂಥ'. 'ರಿಲಿಜನ್' ಎಂಬ ಮಾತನ್ನು 'ಧರ್ಮ' ಎಂದು ಅನುವಾದಿಸಿದುದರ ಪರಿಣಾಮವಾಗಿ 'ಸೆಕ್ಯುಲರಿಸಂ' ಎಂಬ ಮಾತಿಗೆ 'ಧರ್ಮ ನಿರಪೇಕ್ಷತೆ' ಎಂಬ ಪ್ರತಿಶಬ್ದವನ್ನು ಸೃಷ್ಟಿಸಲಾಯಿತು. ಅಹಿಂಸೆ, ಸತ್ಯ, ಅಸ್ತೇಯ (ಎಂದರೆ ಅಪಮಾರ್ಗದಿಂದ ಗಳಿಸದಿರುವುದು), ಶೌಚ (ತ್ರಿಕರಣಶುದ್ಧಿ), ಇಂದ್ರಿಯನಿಗ್ರಹ – ಇವನ್ನು 'ಧರ್ಮ' ಎಂಬ ಶಬ್ದವು ಒಟ್ಟಾಗಿ ಸೂಚಿಸುತ್ತದೆ. 'ಸೆಕ್ಯುಲರಿಸಂ'ಗೆ 'ಧರ್ಮನಿರಪೇಕ್ಷತೆ' ಎಂದು ಅರ್ಥಮಾಡಿದಲ್ಲಿ ಸೆಕ್ಯುಲರ್ ರಾಜ್ಯದಲ್ಲಿ ಅಹಿಂಸೆ, ಸತ್ಯ ಮೊದಲಾದವಕ್ಕೆ ಆಸ್ಪದ ಇಲ್ಲ ಎಂದಂತಾಗುತ್ತದೆ. ನಮ್ಮ ಸಂವಿಧಾನದ ಆಶಯ ಅಧರ್ಮರಾಜ್ಯವನ್ನು ಸ್ಥಾಪಿಸಬೇಕೆಂಬುದಲ್ಲ. ಧರ್ಮನಿರಪೇಕ್ಷ ಎಂದರೆ ಧರ್ಮಶೂನ್ಯ, ನ್ಯಾಯರಹಿತ, ನೀತಿರಹಿತ ಎಂದು ಅರ್ಥವಾಗುತ್ತದೆ. **'ಯತೋ ಧರ್ಮಃ ತತೋ ಜಯಃ'** ಎಂಬ ಪ್ರಸಿದ್ಧ ವಾಕ್ಯ ಮಹಾಭಾರತದಲ್ಲಿ ಬರುತ್ತದೆ. ಇದರರ್ಥ "ಕಾರ್ಯವು ಎಲ್ಲಿ ಧರ್ಮಪೂರಿತವಾಗಿರುವುದೋ ಅಲ್ಲಿ ಜಯ ದೊರಕುತ್ತದೆ" ಎಂದು. ಈ ವಾಕ್ಯದಲ್ಲಿ ಜಯ ದೊರೆಯುತ್ತದೆ ಎಂದಿರುವುದು ವಿಶಾಲಾರ್ಥದ 'ಧರ್ಮ'ಕ್ಕೇ ಹೊರತು ಮತ–ಪಂಥಗಳಿಗಲ್ಲ. ಈ ಅಂಶವನ್ನು ಡಾ. ಎಲ್.ಎಂ. ಸಿಂಘವಿ ಅವರು Freedom on Trial ಎಂಬ ಗ್ರಂಥದಲ್ಲಿ ಹೀಗೆ ಪ್ರಸ್ತಾವಿಸಿದ್ದಾರೆ: "ಸೆಕ್ಯುಲರಿಸಂ ಎಂಬುದಕ್ಕೆ ಪರ್ಯಾಯ ಶಬ್ದವಾಗಿ 'ಧರ್ಮನಿರಪೇಕ್ಷತೆ' ಎಂಬುದನ್ನು ಬಳಸುತ್ತಿರುವುದು ದೋಷಯುಕ್ತ. ಸೆಕ್ಯುಲರಿಸಂ ಎಂಬ ಶಬ್ದಕ್ಕೆ ಹೆಚ್ಚು ಕರಾರುವಾಕ್ಕಾದ ಅನುವಾದ 'ಸಂಪ್ರದಾಯನಿರಪೇಕ್ಷತೆ' ಎಂದಿರಬೇಕು. 'ಧರ್ಮ' ಎಂಬ ಮಾತಿಗೆ ಭಾರತೀಯ ಪರಂಪರೆಯಲ್ಲಿ ನ್ಯಾಯ, ನೈತಿಕತೆ ಎಂಬ ಅರ್ಥವೇ